# ಮಗುವಿನ ನಿಷ್ಕಪಟ ಭಕ್ತಿ

ಸ್ವಾಮಿ ಆತ್ಮಜ್ಞಾನಂದ



ಸರಳ ಭಕ್ತಿಯನ್ನು ಕುರಿತು ಶ್ರೀರಾಮಕೃಷ್ಣರು ಹೇಳಿರುವ ಗುಣವನ್ನು ಮಕ್ಕಳ ಮನಸ್ಸು ಹೇಗೆ ಪ್ರತಿಬಿಂಬಿಸುತ್ತದೆ ಎಂಬುದನ್ನು ಕಥೆಯೊಂದರ ಮೂಲಕ ಇಲ್ಲಿ ವಿವರಿಸಲಾಗಿದೆ. ಈ ಕುರಿತು ಬರೆದಿರುವ ಪೂಜ್ಯ ಸ್ವಾಮೀಜಿಯವರು 'ವಿವೇಕಪ್ರಭ' ದ ಸಂಪಾದಕರಾಗಿದ್ದರು. ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರೂ ಆಗಿದ್ದ ಅವರು ಪ್ರಸ್ತುತ ಬ್ರೆಜಿಲ್‌ನ ರಿಯೋ ಡಿ ಜನೇರಿಯೋ ಆಶ್ರಮದ ಅಧ್ಯಕ್ಷರಾಗಿದ್ದಾರೆ.

**ಮ**ಗುವಿನಂತೆ ಸರಳವಾದ ನಂಬಿಕೆ, ವಿಶ್ವಾಸಗಳಿದ್ದರೆ ಭಗವಂತನ ದರ್ಶನ ಸಾಧ್ಯವೆಂದು ಶ್ರೀರಾಮಕೃಷ್ಣರು ಹಲವಾರು ಬಾರಿ ಹೇಳಿದ್ದಾರೆ. ಸಂಕೋಚ, ಭಯಗಳಿಲ್ಲದೆ ಮುಗ್ಧ ಮನಸ್ಸಿನಿಂದ ವ್ಯಾಕುಲನಾಗಿ ಭಗವಂತನಿಗಾಗಿ ಕಣ್ಣೀರು ಸುರಿಸಬೇಕು ಎಂದು ಹೇಳುತ್ತ ತಮ್ಮ ನೇರ ಶಿಷ್ಯರಾದ ಲಾಟು (ಸ್ವಾಮಿ ಅದ್ಭುತಾನಂದ)ವಿನ ಮುಂದೆ ಮಗುವಿನಂತೆ ಮಲಗಿ ಜೋರಾಗಿ ಅಳುತ್ತ ಕೈಕಾಲು ಬಡಿಯಲಾರಂಭಿಸಿದ್ದರು. ಒಮ್ಮೆ ತಮ್ಮ ಅಣ್ಣನ ಮಗ ಅಕ್ಷಯನ ವಿಶ್ವಾಸ ಹಾಗೂ ಮುಗ್ಧತೆಯ ಬಗ್ಗೆ ಹೇಳುತ್ತ, ಶ್ರೀರಾಮಕೃಷ್ಣರು ಹೇಳುತ್ತಾರೆ: ''ಒಮ್ಮೆ ಅಕ್ಷಯ ಚಿಟ್ಟೆ ಹಿಡಿಯಲು ಪ್ರಯತ್ನಿಸುತ್ತಿದ್ದ. ಗಾಳಿ ಬೀಸಿ ಗಿಡಗಳು ಅಲುಗಾಡಿ ಶಬ್ದವಾದಾಗ ಆ ಪುಟ್ಟ ಬಾಲಕ ಗಿಡಗಳಿಗೆ ಹೇಳಿದ, 'ಶ್, ಶಬ್ದ ಮಾಡಬೇಡಿ. ನಾನು ಚಿಟ್ಟೆಯನ್ನು ಹಿಡಿಯಬೇಕು!' ಮಕ್ಕಳು ಎಲ್ಲೆಡೆ ಚೈತನ್ಯವನ್ನು ಕಾಣುತ್ತಾರೆ ಎಂದು ಶ್ರೀರಾಮಕೃಷ್ಣರು ಈ ದೃಷ್ಟಾಂತದ ಮೂಲಕ ತಿಳಿಸುತ್ತಾರೆ. ಅವರು ಜಗನ್ಮಾತೆಯ ಮುಗ್ಧ ಶಿಶುವೆಂದು ದೀರ್ಘಕಾಲ ಸಾಧನೆ ಮಾಡಿ ಸದಾಕಾಲ ಶಿಶುವಿನಂತೆಯೇ ಆನಂದಮಯರಾಗಿ ಉಳಿದರು. ''ನಾನು ವಿದ್ಯೆ, ಬುದ್ಧಿ ಇಲ್ಲದವ, ಮೂರ್ಖ, ತಾಯಿ ತೋರಿಸಿದ್ದನ್ನು, ನನ್ನಿಂದ ಹೇಳಿಸಿದ್ದನ್ನು ಹೇಳುತ್ತೇನೆ ಅಷ್ಟೆ. ನನಗೇನು ಗೊತ್ತಿಲ್ಲ'' ಎಂದು ಹೇಳುತ್ತ, ''ಎಲ್ಲವೂ ನಿನ್ನಿಚ್ಛೆಯಂತೆ ನಡೆದಿರಲು ...'' (ಬಂಗಾಳಿ ಮೂಲ: 'ಸಕಲೀ ತೋಮಾರ್ ಇಚ್ಛಾ...') ಎಂಬ ಹಾಡನ್ನು ಮಧುರವಾದ ಕಂಠದಿಂದ ಹಾಡುತ್ತ ಸುತ್ತಲೂ ನೆರೆದಿರುತ್ತಿದ್ದ ಭಕ್ತರಿಗೆ ಭಕ್ತಿರಸವನ್ನು ಉಣಿಸುತ್ತಿದ್ದರು.

ತಂತ್ರಶಾಸ್ತ್ರದ ಅನುಸಾರ ದೇವಿಯ ಪೂಜೆಯನ್ನು ಮಾಡುವಾಗ ಅಂಗನ್ಯಾಸ ಮತ್ತು ಕರನ್ಯಾಸಗಳೆಂಬ ವಿಧಿಗಳನ್ನು ಮಾಡಲಾಗುತ್ತದೆ. ದೇವಿಯನ್ನು ಶ್ರೀ ಶ್ರೀ ಚಂಡಿ ('ದುರ್ಗಾಸಪ್ತಶತೀ' ಗ್ರಂಥ)ಯಲ್ಲಿ ಮಂತ್ರಾತ್ಮಿಕೆ, ಶಬ್ದಾತ್ಮಿಕೆ ಎಂದು ಕೊಂಡಾಡಲಾಗಿದೆ. ಅಕ್ಷರವೆಂದರೆ ನಾಶವಿಲ್ಲದ್ದು ಎಂದು ಅರ್ಥ. ನ್ಯಾಸದ ಸಮಯದಲ್ಲಿ ದೇವಿಯ ಬೀಜಮಂತ್ರದೊಂದಿಗೆ ಸ್ವರವ್ಯಂಜನ

ಗಳನ್ನು ಸೇರಿಸಿ ಪೂಜಾರಿಯು ತನ್ನ ದೇಹದ ವಿವಿಧ ಅಂಗಗಳಲ್ಲಿ ಇಷ್ಟದೇವತೆಯು ಅಕ್ಷರರೂಪದಲ್ಲಿ ನೆಲೆಸಿರುವಂತೆ ಭಾವಿಸುತ್ತಾನೆ, ಶ್ರೀರಾಮಕೃಷ್ಣರು ದೇವಿಯ ಪೂಜೆಯನ್ನು ಮಾಡುತ್ತಿದ್ದಾಗ, ನ್ಯಾಸದ ಮುದ್ರೆಗಳನ್ನು ಮಾಡುತ್ತಿದ್ದಾಗ, ತಮ್ಮ ದೇಹದಲ್ಲಿ ಆ ಎಲ್ಲ ಅಕ್ಷರಗಳು ತೇಜಸ್ಸಿನಿಂದೊಡಗೂಡಿ ಹೊಳೆಯುತ್ತಿದ್ದುದನ್ನು ಕಾಣುತ್ತಿದ್ದರು. ಅವರ ಸಂಪೂರ್ಣ ದೇಹವು ಮಂತ್ರಮಯವಾಗಿ ಶೋಭಿಸುತ್ತಿತ್ತು. ವಾಕ್ ಮತ್ತು ಅರ್ಥ, ಅಂದರೆ ಶಬ್ದ ಮತ್ತು ಅದರ ಅರ್ಥ ಹೇಗೆ ಅವಿಭಾಜ್ಯವಾಗಿವೆಯೋ ಅದೇ ರೀತಿ ಪಾರ್ವತೀಪರಮೇಶ್ವರರು ಅಭಿನ್ನರು ಎಂದು ಸ್ತುತಿಸುತ್ತಾನೆ ಕಾಳಿದಾಸ: ''**ವಾಗರ್ಥಾವಿವ ಸಂಪೃಕ್ತೌ ವಾಗರ್ಥಪ್ರತಿಪತ್ತಯೇ । ಜಗತಃ ಪಿತರೌ ವಂದೇ ಪಾರ್ವತೀಪರಮೇಶ್ವರೌ ॥**'' ಪಾರ್ವತಿಪರಮೇಶ್ವರರ ಕೃಪೆಯಿಂದ ಭಾಷಾಜ್ಞಾನವು ನನಗೆ ಅನುಗ್ರಹೀತವಾಗಲಿ ಎಂದು ಪ್ರಾರ್ಥಿಸುತ್ತಾನೆ.

ಅನೇಕರಿಗೆ ಸ್ತೋತ್ರಗಳನ್ನಾಗಲಿ, ಶ್ರೀವಿಷ್ಣುಸಹಸ್ರನಾಮವನ್ನಾಗಲಿ ಅಥವಾ ಲಲಿತಾಸಹಸ್ರನಾಮವನ್ನಾಗಲಿ ಹೇಳಲು ಭಯ. 'ನಮಗೆ ಸಂಸ್ಕೃತ ಶಬ್ದಗಳ ಉಚ್ಚಾರಣೆ ಬರುವುದಿಲ್ಲ, ತಪ್ಪು ತಪ್ಪು ಹೇಳಿದರೆ ಪಾಪ ಬರುವುದು' ಎಂದು ಹೇಳುತ್ತ ಸಾಧನೆಯಲ್ಲಿ ಬಹಳ ಮುಖ್ಯ ಅಂಗವಾದ ಸ್ತೋತ್ರಪಾಠದಿಂದ ವಂಚಿತರಾಗುತ್ತಾರೆ. ತಾವು ಉತ್ತಮ ಜಾತಿಗೆ ಸೇರಿದವರಲ್ಲ, ವಿದ್ಯೆ ಕಲಿತವರಲ್ಲ ಎಂಬ ಅಳುಕು, ಕೀಳರಿಮೆ ಇವರುಗಳಲ್ಲಿ. ಶ್ರೀರಾಮಕೃಷ್ಣರು ಶಾಲೆಯ ವಿದ್ಯಾಭ್ಯಾಸವನ್ನು ಗಳಿಸಲಿಲ್ಲ. ಅವರಿಗೆ ಸಂಸ್ಕೃತವೂ ತಿಳಿದಿರಲಿಲ್ಲ. ಅವರಲ್ಲಿ 'ತಾಯಿ ನನ್ನವಳು, ಸದಾ ನನ್ನನ್ನು ರಕ್ಷಿಸುತ್ತಿರುವಳು' ಎಂಬ ಅಚಲವಾದ ಶ್ರದ್ಧೆಯೊಂದಿತ್ತು. ಭಯ, ಹಿಂಜರಿಕೆ ಎಂದೂ ಇರಲಿಲ್ಲ. ''ತಾಯಿಯ ಹತ್ತಿರ ಸಂಕೋಚವೆ? ಅವಳು ಎಲ್ಲ ಬಲ್ಲಳು. ಮಗು ಸರಿಯಾಗಿ ಮಾತು ಕಲಿತಿಲ್ಲ, ತಪ್ಪುತಪ್ಪಾಗಿ ಕೂಗುತ್ತದೆ ಎಂದು ಅವಳಿಗೆ ಗೊತ್ತು. ಅದು ಹೇಗೆ ಕೂಗಿದರೂ, ತಾಯಿ ಓಡಿ ಬಂದು ಆದರಿಸುತ್ತಾಳೆ; ಎಂದೂ ಕೋಪಗೊಳ್ಳುವುದಿಲ್ಲ, ಅಂಜಿಕೆ ಬೇಡ'' ಎಂದು ಶ್ರೀರಾಮಕೃಷ್ಣರು ಹೇಳಿದ್ದಾರೆ.

ಈ ಎಲ್ಲ ವಿಚಾರಗಳನ್ನು ತಿಳಿಸುವ ಒಂದು ಸುಂದರವಾದ ಕಥೆಯನ್ನು ಓದುಗರಿಗೆ ತಿಳಿಸುವ ಬಯಕೆ ನನಗೆ. ಮನುಷ್ಯ ಬೆಳೆದಂತೆ ತನ್ನ ಮುಗ್ಧತೆಯನ್ನು ಕಳೆದುಕೊಂಡುಬಿಡುತ್ತಾನೆ. ಕೇವಲ ಲೆಕ್ಕಾಚಾರ, ಆಡಂಬರ, ತೋರಿಕೆಗಳಿಂದ ಅಸ್ವಾಭಾವಿಕವಾದ ನಡತೆಯನ್ನು ರೂಢಿಸಿಕೊಂಡು ಮಾನಸಿಕ ಹಾಗೂ ಭಾವನಾತ್ಮಕ ಸಮಸ್ಯೆಗಳಿಂದ ನರಳುತ್ತಾನೆ. ಜೀವನವನ್ನು ಎಷ್ಟು ಸುಂದರವಾಗಿ ರೂಪಿಸಿಕೊಳ್ಳಬಹುದು ನಾವು! ಅತಿ ಆಸೆ, ತೀರದ ಬಯಕೆಗಳ ದಾಸರಾಗಿ ಜೀವನದ ಸೊಬಗನ್ನೇ ಸವಿಯಲಾರದೆ ಸವೆಯುತ್ತೇವೆ! ಎಂತಹ ವಿಪರ್ಯಾಸ! ಒಬ್ಬ ಪ್ರಬುದ್ಧ ಚಿಂತಕ ಹೇಳುತ್ತಾನೆ, ''ಕಿರಿಯ ವಯಸ್ಸಿನವರು ತಾವು ದೊಡ್ಡವರಾಗಬೇಕು, ಹಿರಿಯರೆಂದೆನಿಸಿಕೊಳ್ಳಬೇಕೆಂದು ಬಯಸುತ್ತಾರೆ, ವಯಸ್ಸಾದ ಹಿರಿಯರು ನಾವು ಪುನಃ ಬಾಲ್ಯದ ಹಾಗೂ ಯೌವನದ ಹುರುಪನ್ನು ಪಡೆಯಲು ಹಂಬಲಿಸುತ್ತಾರೆ!''

ಒಂದು ಪ್ರಸಿದ್ಧ ದೇವಿಯ ಗುಡಿಯಿತ್ತು. ದೇವಿಯ ಅನುಗ್ರಹವನ್ನು ಪಡೆಯಲು ಅನೇಕರು–ಧನಿಕರು–ಬಡವರು, ಹಿರಿಯರು–ಕಿರಿಯರು; ಬಲ್ಲವರು–ನಿರಕ್ಷರಕುಕ್ಷಿಗಳು – ಎಲ್ಲರೂ ತಮ್ಮದೇ ಆದ ಪ್ರಾರ್ಥನೆ–ಬೇಡಿಕೆಗಳೊಂದಿಗೆ ಬರುತ್ತಿದ್ದರು. ಕೆಲವರು ತಮ್ಮ ಅಂತಸ್ತನ್ನು ಮೆರೆಯಲು ಸಿಂಗರಿಸಿಕೊಂಡು, ಅನೇಕ ಆಭರಣಗಳನ್ನು ಹೇರಿಕೊಂಡು ಆಡಂಬರದಿಂದ ಬಂದರೆ ಮತ್ತೆ ಕೆಲವರು ತಮಗಿಂತ ದೊಡ್ಡ ಭಕ್ತರಿಲ್ಲ ಎಂದು ಪ್ರದರ್ಶಿಸುವುದರಲ್ಲೇ ಹೆಚ್ಚು ಆಸಕ್ತರು! ಆ ದೇವಾಲಯಕ್ಕೆ ಪ್ರತಿನಿತ್ಯವೂ ಒಬ್ಬ ಪುಟ್ಟ ಬಾಲಕಿ ಬರಲಾರಂಭಿಸಿದಳು. ಮಳೆಯಿರಲಿ, ಬಿಸಿಲಿರಲಿ – ಏನೇ ಆದರೂ ತಪ್ಪದೆ ಬರುವಳು. ದೇವಿಯ ಮುಂದೆ ನಿಂತು ಕೈಗಳನ್ನು ಜೋಡಿಸಿ ಪಿಸುದನಿಯಲ್ಲಿ ಅದೇನೋ ಹೇಳಿಕೊಳ್ಳುತ್ತಿದ್ದಳು. ತನ್ನ ಪ್ರಾರ್ಥನೆ ಆದ ಮೇಲೆ ನಮಸ್ಕಾರ ಮಾಡಿ ಕುಣಿಕುಣಿಯುತ್ತ ಓಡಿಹೋಗುತ್ತಿದ್ದಳು.

ಆ ದೇವಸ್ಥಾನದ ಪ್ರಧಾನ ಅರ್ಚಕರು ಈ ಪುಟಾಣಿಯನ್ನು ಗಮನಿಸಿದರು. ಅವರು ಹೆಸರಾಂತ ಪಂಡಿತರು, ನೋಡಲು ಆಜಾನುಬಾಹು, ತೇಜಸ್ವಿಯಾಗಿದ್ದರು. ಅವರು ಪೂಜೆ–ಆರತಿಗಳನ್ನು ಮಾಡುವಾಗ ಮಂತ್ರಗಳನ್ನು ಸ್ಪಷ್ಟವಾಗಿ ರಾಗಬದ್ಧವಾಗಿ ಉಚ್ಚರಿಸುತ್ತಿದ್ದರು. ಅದನ್ನು ಕೇಳುವುದೇ ಒಂದು ವಿಶೇಷ ಆಕರ್ಷಣೆಯಾಗಿತ್ತು ಭಕ್ತರಿಗೆ. ಒಂದು ದಿನ ಆ ಪುಟ್ಟಿ ಪ್ರಾರ್ಥನೆ ಮುಗಿಸಿದ ಮೇಲೆ ಅರ್ಚಕರು ಅವಳನ್ನು ಬಳಿಗೆ ಕರೆದು, ''ಏನಮ್ಮಾ ಮಗು! ಪ್ರತಿನಿತ್ಯವೂ ನೀನು ಬರುತ್ತಿರುವೆ ಹಾಗೂ ದೇವಿಯ ಮುಂದೆ ನಿಂತು ಅದೇನೋ ಮಂತ್ರಗಳನ್ನು ಹೇಳಿಕೊಳ್ಳುತ್ತೀಯೆ. ಏನದು! ಒಮ್ಮೆ ಜೋರಾಗಿ ಹೇಳು. ನಾನೂ ಕೇಳಿಸಿಕೊಳ್ಳುವೆ'' ಎಂದರು. ಹುಡುಗಿ ನಿಸ್ಸಂಕೋಚವಾಗಿ ಹೇಳಿದಳು, ''ನನಗೆ ಯಾವ ಮಂತ್ರವೂ ಗೊತ್ತಿಲ್ಲ. ಶಾಲೆಯಲ್ಲಿ ಮೇಷ್ಟ್ರು ಅ, ಆ, ಇ, ಈ ಹೇಳಿಕೊಟ್ಟಿದ್ದಾರೆ. ಅದನ್ನು ಹೇಳಿಕೊಂಡು ಪ್ರಾರ್ಥಿಸುತ್ತೇನೆ. ದೇವಿಯು ತನ್ನಿಷ್ಟ ಬಂದಂತೆ ಅಕ್ಷರಗಳನ್ನು ಜೋಡಿಸಿಕೊಂಡು ಮಂತ್ರಗಳನ್ನು ಮಾಡಿಕೊಳ್ಳಲಿ. ನನಗೆ ಇದಕ್ಕಿಂತ ಹೆಚ್ಚು ಬರುವುದಿಲ್ಲ ಎಂದು ದೇವಿಗೆ ಗೊತ್ತಿದೆ ತಾನೆ?'' ಅವಳ ಮುಗ್ಧ ವಿಶ್ವಾಸ–ಭಕ್ತಿಯನ್ನು ಕಂಡು ಅರ್ಚಕರು ಕಣ್ಣೀರು ಸುರಿಸಿದರು! ಇದು ನಿಜವಾದ ನಿರಾಡಂಬರ ಭಕ್ತಿಯಲ್ಲವೇ ಎಂದು ಅರಿತು ಬಾಲಕಿಗೆ ಪ್ರೋತ್ಸಾಹ ನೀಡಿದರು. ''ನೀನು ಹೇಳುವುದು ನಿಜ, ತಾಯಿಗೆ ಮಗುವಿನ ಮನಸ್ಸಿನಲ್ಲಿ ಏನಿದೆ ಎಂದು ಗೊತ್ತು. ನೀನು ತಪ್ಪದೇ ಪ್ರತಿನಿತ್ಯವೂ ಬಂದು ತಾಯಿಯ ದರ್ಶನ ಮಾಡು. ನಿನಗಾಗಿ ತಾಯಿ ಕಾಯುತ್ತಿರುತ್ತಾಳೆ!'' ಎಂದು ಆಶೀರ್ವದಿಸಿದರು.

ದೇವಿಯ ಮುಖದಲ್ಲಿ ಮಂದಹಾಸ ಬೀರುತ್ತಿತ್ತು! ಪುಟ್ಟ ಬಾಲಕಿ ಆನಂದದಿಂದ ಕುಣಿಯುತ್ತ ಹೊರಟಳು.